**ಸಾಕ್ಷಿಯನ್ನು ದಿನಾಂಕ 21.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4, 8 ರಿಂದ 21 ನೇ ಪ್ರತಿವಾದಿ ಪರ ಶ್ರೀ ಎಸ್.ಪಿ ವಕೀಲರಿಂದಃ**

ವಾದಿ ಪ್ರತಿವಾದಿಯರು ದಾವಆಸ್ತಿಯಲ್ಲಿ ಜಂಟಿ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಎಲ್ಲ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ಸಾಕ್ಷಿದಾರರಿಗೆ ಅವರು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಯಾವ ದಾಖಲೆಗಳು ಜಂಟಿ ಸ್ವಾಧೀನದಲ್ಲಿರುವ ದಾಖಲೆಗಳು ಎಂದರೆ ಸಾಕ್ಷಿದಾರರು ನನಗೆ ಅಷ್ಟು ಓದಲು ಬರುವುದಿಲ್ಲ ಎನ್ನುವರು. ನನ್ನ ತಾತ ಶೇಖರಪ್ಪನವರ ಹೆಸರಿನಲ್ಲಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಾತನ ಹೆಸರಿನಲ್ಲಿರುವ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತನಿಗೆ 4 ಜನ ಮಕ್ಕಳು ಎಂದರೆ ಸರಿ. ನಿಪಿ5 ರಲ್ಲಿ ನನ್ನ ತಾತನಿಗೆ 3 ಜನ ಮಕ್ಕಳು ಮಾತ್ರ ಎಂದು ತೋರಿಸಿರುತ್ತೇನೆ ಎಂದರೆ ಸಾಕ್ಷಿದಾರರು ಶಿವಮ್ಮನವರ ಮಕ್ಕಳಿಗೆ ದಾವೆ ಹಾಕುತ್ತಿರುವ ಬಗ್ಗೆ ಕೇಳಿದ್ದು ಅವರು ದಾವೆಯಲ್ಲಿ ನಮ್ಮನ್ನು ಪಕ್ಷಗಾರರಾಗಿ ಮಾಡುವುದು ಬೇಡ ಎಂದು ಹೇಳಿದ್ದರಿಂದ ಅವರನ್ನು ಸೇರಿಸಿರುವುದಿಲ್ಲ ಎನ್ನುವರು. ಸದರಿ ವಿಚಾರವನ್ನು ದಾವಪತ್ರದಲ್ಲಿ ನಮೂದಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ಜಂಟಿ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಇರುವುದನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ನಾನು ಆ ರೀತಿ ಜಂಟಿ ಸ್ವಾಧೀನದಲ್ಲಿರುವ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಆಸ್ತಿಗಳ ಪಹಣಿಯಲ್ಲಿ ನಿಮ್ಮ ತಂದೆಯ ಹೆಸರು ಬಂದಿರುತ್ತದಾ ಎಂದರೆ ಸಾಕ್ಷಿದಾರರು ನಾನು ಮರೆತಿರುತ್ತೇನೆ ಎನ್ನುವರು. ನನ್ನ ತಂದೆ ತೀರಿಕೊಂಡಾಗ ಅವರಿಗೆ 60 ವರ್ಷ ವಯಸ್ಸಾಗಿತ್ತು. ಅವರು ಸಾಯುವ ಪೂರ್ವದಲ್ಲಿ ದಾವಆಸ್ತಿಯ ಖಾತೆಯು ಎಂದಿಗೂ ಅವರ ಹೆಸರಿಗೆ ಬಂದಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ವಿಭಾಗಕ್ಕೆ ಬಂದ 2-25 ಎಕರೆ ಜಮೀನನ್ನು ನನ್ನ ದೊಡ್ಡಪ್ಪನಾದ ಶಿವಣ್ಣನವರಿಗೆ ದಿನಾಂಕ 30.3.1983 ರ ಕ್ರಯಪತ್ರದಂತೆ ಮಾರಾಟ ಮಾಡಿರುವುದರಿಂದ ನಂತರದ ಪಹಣಿಯಲ್ಲಿ ನನ್ನ ತಂದೆಯ ಹೆಸರು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೋರಿರುವ 4 ನೇ ಪರಿಹಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಶುಲ್ಕವನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು

9-10 ಎಕರೆ ಜಮೀನಿಗೆ ದಾಖಲಿಸಿರುತ್ತೇನೆ. ಸದರಿ 9-10 ಎಕರೆ ಜಮೀನು ಮೂಲತಃ ನನ್ನ ತಾತನಿಗೆ ಸೇರಿತ್ತು ಎಂದರೆ ಸರಿ. ವಿಭಾಗವಾದ ನಂತರ ನನ್ನ ತಂದೆಯು ಶಿವಣ್ಣನವರಿಗೆ ಮಾರಾಟ ಮಾಡಿದ 2-25 ಎಕರೆ ಮತ್ತು ಶಿವಣ್ಣನವರ ಪಾಲಿಗೆ ಬಂದ 2-25 ಎಕರೆ, ಒಟ್ಟು 5-10 ಎಕರೆ ಪಹಣಿಯು ನನ್ನ ದೊಡ್ಡಪ್ಪ ಶಿವಣ್ಣನವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಶಿವಣ್ಣನವರು 2009 ರಲ್ಲಿ ತೀರಿಕೊಂಡಿರುತ್ತಾರೆ. ಶಿವಣ್ಣನವರು ತೀರಿಕೊಂಡ ನಂತರ ಅವರ ಮಕ್ಕಳ ಹೆಸರಿಗೆ ಸದರಿ 5-10 ಎಕರೆ ಜಮೀನಿನ ಪೌತಿ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿದಾರರು ನಮಗೆ ಗೊತ್ತಿಲ್ಲದಂತೆ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುವರು. ನಾನು ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ಅರ್ಹನಲ್ಲದಿದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 22 ಮತ್ತು 23 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್ ವಕೀಲರಿಂದಃ</u>**

22 ಮತ್ತು 23 ನೇ ಪ್ರತಿವಾದಿಯರನ್ನು ಏಕೆ ಪಕ್ಷಗಾರರಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ಪಹಣಿಯಲ್ಲಿ ಅವರ ಹೆಸರು ಇದುದ್ದರಿಂದ ಅವರನ್ನು ಪಕ್ಷಗಾರರಾಗಿ ಮಾಡಿರುತ್ತೇನೆ ಎನ್ನುವರು. ಈ ದಾವೆ ಸಲ್ಲಿಸಿದಾಗ 22 ಮತ್ತು 23 ನೇ ಪ್ರತಿವಾದಿಯರ ಹೆಸರಿನಲ್ಲಿ ಪಹಣಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. 22 ಮತ್ತು 23 ನೇ ಪ್ರತಿವಾದಿಯರ ಹೆಸರಿಗೆ ಕ್ರಯಪತ್ರವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರಿ ಹೆಸರಿಗೆ ಆಗಿರುವ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕ್ರಯಪತ್ರವನ್ನು ನಾನೇ ನೋಂದಣಿ ಕಛೇರಿಯಿಂದ ಪಡೆದುಕೊಂಡಿರುತ್ತೇನೆ. ಈ ದಾವೆ ಸಲ್ಲಿಸಿದ ಸಮಯದಲ್ಲಿ ಸದರಿ ಕ್ರಯಪತ್ರದಲ್ಲಿ ನಮೂದಿಸಿರುವ ಆಸ್ತಿಯ ಪಹಣಿಗಳು ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಈ ದಾವೆಯ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 22 ಮತ್ತು 23 ನೇ ಪ್ರತಿವಾದಿಯರ ಹೆಸರಿಗೆ ಆಗಿರುವ ಕ್ರಯಪತ್ರವನ್ನು ರದ್ದುಪಡಿಸಬೇಕೆಂದು ನಾನು ಪರಿಹಾರ ಕೇಳಿರುತ್ತೇನೆ. ಸದರಿ ಕ್ರಯಪತ್ರಗಳು ಎಷ್ಟು ಮೌಲ್ಯಕ್ಕೆ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ8 ಮತ್ತು ನಿಪಿ9 ಕ್ರಯಪತ್ರಗಳು ನಾನು ದಾವೆ ಹಾಕುವ 1 ವರ್ಷದ ಹಿಂದೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ8 ರ ಪ್ರಕಾರ 23 ನೇ ಪ್ರತಿವಾದಿಗೆ 4.50 ಲಕ್ಷ ರೂ.ಗೆ ಕ್ರಯವಾಗಿರುತ್ತದೆ ಎಂದರೆ ಇರಬಹುದು. ಅದೇ ರೀತಿ ನಿಪಿ9 ರ ಪ್ರಕಾರ 22 ನೇ ಪ್ರತಿವಾದಿಗೆ 16 ಲಕ್ಷ ರೂ.ಗೆ ಕ್ರಯವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಾಗಲೂ ಸಹ ಎಷ್ಟು

ಮೊತ್ತಕ್ಕೆ ಕ್ರಯವಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ದಾವೆಯಲ್ಲಿ ಕೋರಿರುವ 4 ನೇ ಪರಿಹಾರಕ್ಕೆ ಸಂಬಂಧಿಸಿದಂತೆ ನಿಗದಿತ ನ್ಯಾಯಾಲಯ ಶುಲ್ಕವನ್ನು ಪಾವತಿಸಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು 22 ಮತ್ತು 23 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅನ್ಯಾಯದ ಪಾಯಿದೆ ಹೊಂದಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.